ದಿನಾಂಕ 25-07-2025 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** ಪ್ರತಿವಾದಿ ಪರವಾಗಿ ಶ್ರೀ ಜಿ ವಿ ಕೆ ವಕೀಲರಿಂದ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಾನು ನೀಡಿದ ಮಾಹಿತಿಯಂತೆ ತಯಾರಿಸಿ ಹಾಜರುಪಡಿಸಲಾಗಿದೆ ಎಂದರೆ ಸರಿ. ದಾವಾ ಆಸ್ತಿಯು ಹೊನ್ನಪ್ಪ ಪರಸಪ್ಪ ಚಾಪ್ಪೋಳಕರ ರವರಿಗೆ ಭೂ ನ್ಯಾಯಾ ಮಂಡಳಿಯಿಂದ ದಿನಾಂಕ 02-11-1977 ರಲ್ಲಿ ಮಂಜೂರಾಗಿದೆ ಎಂದರೆ ಸರಿ. ಹೊನ್ನಪ್ಪ ಪರಸಪ್ಪ ಚಾಪ್ಪೋಳಕರ ರವರು ಸರ್ಕಾರಕ್ಕೆ ರೂ.6,886/- ಗಳನ್ನು ಪಾವತಿ ಮಾಡಿ ಮಂಜೂರಿ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ನನಗೆ ಈಗ 67 ವಯಸ್ಸು, ವಾದಿ 4 ರವರಿಗೆ 68 ವರ್ಷ ವಯಸ್ಸು ಎಂದರೆ ಸರಿ. ನಾವು ಜನಸಿದ ನಂತರ ದಾವಾ ಸ್ವತ್ತು ಹೊನ್ನಪ್ಪ ಪರಸಪ್ಪ ಚಾಪ್ಪೋಳಕರ ರವರಿಗೆ ಮಂಜೂರಾಗಿದೆ ಎಂದರೆ ಸರಿ. ದಾವಾ ಸ್ವತ್ತು ಮಂಜೂರಾಗುವ ಮೊದಲು ನಿಮ್ಮ ತಾಯಿಯ ವಿವಾಹ ಆಗಿತ್ತು ಮತ್ತು ವಾದಿ 4 ರವರ ವಿವಾಹ ಆಗಿತ್ತು ಎಂದರೆ ಸರಿ. ದಾವಾ ಆಸ್ತಿ ಹೊನ್ನಪ್ಪ ಪರಸಪ್ಪ ಚಾಪ್ಪೋಳಕರ ರವರ ಸ್ವಯಾರ್ಜಿತ ಆಸ್ತಿ, ಜಂಟಿ ಕುಟುಂಬ ಆಸ್ತಿ ಅಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ ಪ್ರತಿವಾದಿಯರಿಗೆ ಮಾತ್ರ ಪಾಲು ಇದ್ದು, ನಿಮಗೆ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರದು ನಮ್ಮ ತಾಯಿಯ ಆಸ್ತಿ ನಮಗೆ ಬೇಕು ಎನ್ನುತ್ತಾರೆ.

O.S.77/2023 Cross of PW 1

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.